ಪ್ರಜಾವಾಣಿ




ವಿಚಾರಗೋಷ್ಠಿಯಲ್ಲಿ ಮಾತನಾಡುತ್ತಿರುವ ಭಾಷಾಶಾಸ್ತ್ರಜ್ಞ ಪ್ರೊ. ಎಸ್ ಶ್ರೀಧರ್, ಜೈನ್ ವಿಶ್ವವಿದ್ಯಾಲಯದ ಡಾ. ಸಂದೀಪ್ ಶಾಸ್ತ್ರಿ ಚಿತ್ರದಲ್ಲಿದ್ದಾರೆ

ಭಾಷಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಜೈನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಇಂಡಿಯನ್ ಸೈಕಾಲಜಿ, 'ಭಾಷೆ ಮತ್ತು ಸಾಂಸ್ಕೃತಿಕ ವೈವಿಧ್ಯ' ವಿಷಯದ ಕುರಿತು ಇತ್ತೀಚೆಗೆ ವಿಚಾರಗೋಷ್ಠಿಯನ್ನು ಹಮ್ಮಿಕೊಂಡಿತ್ತು.

ನ್ಯೂಯಾರ್ಕ್‌ನ ಸ್ಟೋನಿ ಬ್ರೂಕ್ ಯೂನಿವರ್ಸಿಟಿಯ ಸೆಂಟರ್ ಫಾರ್ ಇಂಡಿಯಾ ಸ್ಟಡೀಸ್ ಕೇಂದ್ರದ ಪ್ರೊ. ಎಸ್. ಶ್ರೀಧರ್ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಜೈನ್ ವಿಶ್ವವಿದ್ಯಾಲಯ ಕುಲಪತಿ ಡಾ. ಸಂದೀಪ್ ಶಾಸ್ತ್ರಿ ಉಪಸ್ಥಿತರಿದ್ದರು.

ಪ್ರೊ. ಶ್ರೀಧರ್ ಮಾತನಾಡಿ, 'ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಗೆ ಉತ್ತರಿಸಲು ಸಾಧ್ಯವಾಗದ ಪ್ರಪಂಚದ ಹಲವು ಪ್ರಶ್ನೆಗಳಿಗೆ ಸಂಸ್ಕೃತದಲ್ಲಿ ಉತ್ತರವಿದೆ. ಹೀಗಾಗಿಯೇ ವಿಶ್ವ ಭಾಷಾ ಅಧ್ಯಯನ ಹಾಗೂ ಸಂಶೋಧನಾ ಜಗತ್ತಿನಲ್ಲಿ ಭಾರತ ಅಗ್ರಮಾನ್ಯ ಸ್ಥಾನ ಗಳಿಸುವುದು ಸಾಧ್ಯವಾಗಿದೆ' ಎಂದು ಹೇಳಿದರು.

ಭಾಷೆ ಮತ್ತು ಚಿಂತನೆ ನಡುವಿನ ಅಸಾಮಾನ್ಯ ಸಂಪರ್ಕ ಹಾಗೂ ಸಾಂಸ್ಕೃತಿಕ ವೈವಿಧ್ಯದ ಮೇಲೆ ಭಾಷೆಯ ಪ್ರಭಾವವನ್ನು ಕುರಿತು ಅನೇಕ ಮಹತ್ವದ ವಿಷಯಗಳನ್ನು ಹಂಚಿಕೊಂಡ ಶ್ರೀಧರ್, ಇಂದಿನ ಕಂಪ್ಯೂಟರ್ ಯುಗದಲ್ಲಿ, ಸಂಸ್ಕೃತ ಭಾಷೆ ಮತ್ತು ಕಂಪ್ಯೂಟರ್ ಸೈನ್ಸ್‌ಗೆ ಇರುವ ಸಂಬಂಧದ ಬಗ್ಗೆಯೂ ಕುತೂಹಲಕಾರಿ ಅಂಶಗಳನ್ನು ವಿವರಿಸಿದರು. ⌘